ಅಸಲು ದಾವೆ ಸಂಖ್ಯೆ - 99/2017
ಡಿ.ಡಬ್ಲ್ಯೂ - 01
ದಿನಾಂಕ: 26-03-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ.ಪಿ ಆರ್ ಕೆ ವಕೀಲರಿಂದ**

ದಾವಾ ಆಸ್ತಿಗಳು ನಿಮ್ಮ ಹಿರಿಯರಿಂದ ಬಂದ ಆಸ್ತಿಗಳು ಎಂದರೆ ಸರಿ. 2 ನೇ ಪ್ರತಿವಾದಿ ನಿಮ್ಮ ತಂದೆ ಎಂದರೆ ಸರಿ. ನಿಮ್ಮ ತಂದೆಗೆ ಎಷ್ಟು ಜನ ಮಕ್ಕಳು ಎಂದರೆ ಇಬ್ಬರು ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು.ನಿಮ್ಮ ತಮ್ಮ ರವಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ನಿಮ್ಮ ತಮ್ಮ ತೀರಿಕೊಂಡ ನಂತರ ನಿಮ್ಮ ತಮ್ಮನ ಹೆಂಡತಿ ಹಿಸ್ಸೆ ಕೇಳಿ ದಾವೆ ಮಾಡಿದ್ದರು ಎಂದರೆ ಸರಿ. ಆ ಪ್ರಕಾರ ಅವರಿಗೆ ¼ ಅಂಶ ಹಿಸ್ಸೆಯನ್ನು ಕೊಡಬೇಕು ಎಂದು ಆದೇಶ ಆಗಿತ್ತು ಎಂದರೆ ಸರಿ. ಮುಂದುವರೆದು ಆ ಪ್ರಕರಣದಲ್ಲಿ ನಮಗೆ ಯಾವುದೇ ನೋಟಿಸ್ ಬಂದಿರುವುದಿಲ್ಲ. ನಂತರ ದಾವಾ ಆಸ್ತಿಯನ್ನು ಪಡೆಯುವ ಸಲುವಾಗಿ ಅವರು ಎಫ್ ಡಿ ಪಿ 11/2014 ನ್ನು ಹೂಡಿ ದಾವಾ ಆಸ್ತಿಯನ್ನು ಅಳತೆ ಮಾಡಲು ಒಬ್ಬ ವಕೀಲರನ್ನು ನೇಮಕ ಮಾಡಿಕೊಂಡಿದ್ದರು ಎಂದರೆ ಸರಿ. ಮುಂದುವರೆದು ನಮಗೆ ಯಾವುದೇ ನೋಟಿಸ್ ಬಂದಿರುವುದಿಲ್ಲ. ದಾವಾ ಆಸ್ತಿಯನ್ನು ಅಳತೆ ಮಾಡಲು ತಾಲುಕಾ ಸರ್ವೆಯರ ರವರು ಬಂದಿದ್ದರು ಎಂದರೆ ಸರಿಯಲ್ಲ. ನಿಮಗೆ ಗೊತ್ತಿದ್ದರು ಸಹ ಇಲ್ಲ ಎಂದು ಸುಳ್ಳುನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಮ್ಮ ಹೆಂಡತಿ ಪರವಾಗಿ ಆದ ಆದೇಶವನ್ನು ಪ್ರಶ್ನೀಸಿ ನೀವು ಮೇಲ್ಮಮನವಿ ಸಲ್ಲಿಸಿದ್ದು ಅದು ವಜಾ ಆಗಿರುತ್ತದೆ ಎಂದರೆ ಸರಿ. ಅದನ್ನು ಪ್ರಶ್ನಿಸಿ ನೀವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮಮನವಿ ಸಲ್ಲಿಸಿರುತ್ತೀರಿ ಎಂದರೆ ಸರಿ. ಸದರಿ ಆಸ್ತಿಯಲ್ಲಿ ನಿಮ್ಮ ತಮ್ಮನ ಹೆಂಡತಿಗೆ ¼ ಅಂಶ ಹಿಸ್ಸೆ ಇದೆ ಎಂದರೆ ಸರಿ. ದಾವೆ ಚಾಲ್ತಿಯಲ್ಲಿದ್ದಾಗ ಸದರಿ ಆಸ್ತಿಗಳನ್ನು ನೀವು ಬೇರೆಯವರಿಗೆ ಸಂಚಗಾರ ಪತ್ರ ಮಾಡಿಕೊಟ್ಟಿರುತ್ತೀರಿ ಎಂದರೆ ನಮ್ಮ ತಮ್ಮ ಮಾಡಿದ ಸಾಲವನ್ನು ತೀರಿಸುವ ಸಲುವಾಗಿ ಮಾಡಿದ್ದೇವೆ. ನಿಮ್ಮ ತಮ್ಮ ಸಾಯುವ ಕಾಲಕ್ಕೆ ಯಾವುದೇ ಸಾಲ ಇರಲಿಲ್ಲ ಎಂದರೆ 5 ಲಕ್ಷ ಇತ್ತು. ನಿಮ್ಮ ತಮ್ಮನ ಹೆಂಡತಿಗೆ ಹಿಸ್ಸೆ ಹೋಗಬಾರದು ಎಂಬ ಉದ್ದೇಶದಿಂದ ಸಂಚಗಾರ ಪತ್ರವನ್ನು ಮಾಡಿದ್ದೀರಿ ಎಂದರೆ ಸರಿಯಲ್ಲ.

ವಾದಿಯರು ಆಸ್ತಿಯನ್ನು ಮಾರಾಟ ಮಾಡಬೇಡಿ ಎಂದು ಕೇಳಿದ್ದರು ಎಂದರ ಸರಿಯಲ್ಲ.

ವಾದಿಗೆ ತಿಳಿಯದ ಹಾಗೆ ಸಂಚಗಾರ ಪತ್ರ ಮಾಡಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನಿಮಗೆ ಸಂಪೂರ್ಣವಾದ ಹಕ್ಕು ಇಲ್ಲದೇ ಇದ್ದರು ಮಾರಾಟ ಮಾಡಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.